ಸಾಕ್ಷಿಯನ್ನು ದಿನಾಂಕಃ 17/06/2026 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಶ್ರೀಮತಿ ಆರ್ ಡಿ ಎಲ್ ವಕೀಲರಿಂದಃ**

ದಿಃ 01/09/2010 ರಂದು ನಿಮ್ಮ ತಂದೆ ತಾಯಿಯವರು ಬಿ ಕೆ ಗೋಪಾಲರವರಿಗೆ 1 ಲಕ್ಷ ರೂಪಾಯಿ ಡಿಪಾಸಿಟ್ ಪಡೆದುಕೊಂಡು ಪತ್ರ ಬರೆದುಕೊಟ್ಟಿದ್ದರು ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ನಿಮ್ಮ ತಂದೆ ತಾಯಿಯವರು ಪುಣ್ಯಭೂಮಿ ಹೋಟೆಲ್ ಬಾಡಿಗೆದಾರರಿಂದ ತಿಂಗಳು 6 ಸಾವಿರ ರೂಪಾಯಿ ಯಂತೆ ಒಟ್ಟು ರೂ.60,000/-, 01/09/2010 ರಿಂದ 37/11/2011 ರವರೆಗೆ ಬಾಡಿಗೆ ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಅದು ನನ್ನ ತಂದೆ ತಾಯಿ ಹಿಸ್ಸೆಗೆ ಬಂದ ಆಸ್ತಿಯಾಗಿದ್ದರಿಂದ ಅವರು ಪಡೆದುಕೊಂಡಿರಬಹುದು ಎಂದು ಹೇಳುತ್ತಾರೆ. ನಿಮ್ಮ ತಂದೆ ತೀರಿಕೊಂಡ ನಂತರ ನಿಮ್ಮ ತಾಯಿ ಹೊಟೇಲ್ ಪುಣ್ಯಭೂಮಿಯ ಬಾಡಿಗೆಯನ್ನು 6 ಸಾವಿರದಿಂದ 8 ಸಾವಿರಕ್ಕೆ ಏರಿಸಿದ್ದಾರೆ ಎಂದರೆ ಸಾಕ್ಷಿ ನಮ್ಮ ತಂದೆ ತಾಯಿ ಪರವಾಗಿ 4 ನೇ ಪ್ರತಿವಾದಿಯವರೇ ಎಲ್ಲಾ ಮನೆತನದ ವ್ಯವಹಾರ ನೋಡಿಕೊಳ್ಳುತ್ತಿದ್ದರಿಂದ, ಈ ವಿಷಯ ಅವರಿಗೆ ಗೊತ್ತು ಎಂದು ಹೇಳುತ್ತಾರೆ. ದಿಃ 01/08/2011 ರಿಂದ 01/04/2017 ರವರೆಗೆ ಒಟ್ಟು 5 ವರ್ಷ 8 ತಿಂಗಳು ಬಾಡಿಗೆ ಹೋಟೆಲ್ ಪುಣ್ಯಭೂಮಿ ಮಾಲೀಕರಿಂದ 5 ಲಕ್ಷ 50 ಸಾವಿರ ಮತ್ತು 1 ಲಕ್ಷ ಡಿಪಾಸಿಟ್ ಹಣವನ್ನು ನಿಮ್ಮ ತಾಯಿಯವರು ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿ ನನ್ನ ತಂದೆ ತಾಯಿಗೆ ಹಿಸ್ಸಗೆ ಬಂದ ಆಸ್ತಿಯಲ್ಲಿ ಆ ಹಣ 4 ನೇ ಪ್ರತಿವಾದಿ ತಮ್ಮ ಮನೆಯ ಖರ್ಚಿಗೆ  ಪಡೆದುಕೊಂಡಿದ್ದಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಮೇಲ್ಮಹಡಿಯಲ್ಲಿ ಗುರುಕುಲ ಕ್ಲಾಸ ನೆಡೆಸಲು ಅಯ್ಯನಗೌಡರವರಿಗೆ ಬಾಡಿಗೆ ಕೊಟ್ಟಿದ್ದರು , ದಿಃ 22/06/2016 ರಿಂದ 01/04/2017 ರವರೆಗೆ ತಿಂಗಳಿಗೆ ರೂ.1200 /-ರಂತೆ ಒಟ್ಟು ರೂ.13,200/- ನ್ನು ಅವರಿಂದ ನಿಮ್ಮ ತಾಯಿ ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿ ನನ್ನ ತಂದೆ ತಾಯಿಯ ಹಿಸ್ಸಗೆ ಬಂದ ಆಸ್ತಿಯಲ್ಲಿ ಆ ಹಣ 4 ನೇ ಪ್ರತಿವಾದಿ ತೆಗೆದುಕೊಂಡಿರಬಹುದು, ನನ್ನ ತಾಯಿ ತೆಗೆದುಕೊಂಡಿರಬಹುದು,

ನನಗೆ ನಿಖರವಾಗಿ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಮೇಲೆ ಹೇಳಿದ ಆಸ್ತಿಯಿಂದ ಒಟ್ಟು ರೂ.6,63,200/- ಬಾಡಿಗೆ ಹಣವನ್ನು ನಿಮ್ಮ ತಾಯಿ ಪಡೆದುಕೊಂಡಿದ್ದೀರಿ ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಬಂದ ಹಣದಲ್ಲಿ ಬಸವೇಶ್ವರ ಬ್ಯಾಂಕ ಗದಗದಲ್ಲಿ 5 ಠೇವಣಿ ಹಣಗಳನ್ನು ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ 4 ನೇ ಪ್ರತಿವಾದಿ ಗೊತ್ತು ಮತ್ತು ನನ್ನ ತಾಯಿಗೆ ಗೊತ್ತು ಎಂದು ಹೇಳುತ್ತಾರೆ. ಸದರಿ ಠೇವಣಿಯ ಬಡ್ಡಿಯನ್ನು ನಿಮ್ಮ ತಾಯಿ ಅವರ ಬ್ಯಾಂಕ ಖಾತಾ ನಂ.1634 ರಲ್ಲಿ ಜಮಾ ಆಗುವಂತೆ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ 4 ನೇ ಪ್ರತಿವಾದಿಯು ಅದರಲ್ಲಿದ್ದ ವ್ಯವಹಾರ ನೋಡಿಕೊಳ್ಳುತ್ತಿದ್ದರು , ಮನೆಯ ಖರ್ಚೆಲ್ಲಾ ನನ್ನ ತಾಯಿ ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ಸದರಿ 5 ಠೇವಣಿಗಳಿಗೆ 4 ನೇ ಪ್ರತಿವಾದಿಯ ಮಗ ಶಿವರಾಜರವರು ನಾಮಿನಿ ಆಗಿದ್ದಾರೆ ಎಂದರೆ ಸಾಕ್ಷಿ ಆಗಿರಬಹುದು ಆದರೆ ಅದರ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ನಿಮ್ಮ ತಾಯಿ ಸದರಿ ಮನೆಯ ಟ್ಯಾಕ್ಸ, ಸಣ್ಣ ಪುಟ್ಟ ಖರ್ಚು, ನಳದ ಬಿಲ್ ಗೆ ಒಟ್ಟು 1,50,000/- ಖರ್ಚು ಮಾಡಿದ್ದಾರೆ ಎಂದರೆ ಹೆಚ್ಚಿಗೆ ಖರ್ಚು ಮಾಡಿದ್ದಾರೆ ಮತ್ತು 4 ನೇ ಪ್ರತಿವಾದಿ ತಮ್ಮ ಕುಟುಂಬಕ್ಕೆ ಖರ್ಚು ಮಾಡಿದ್ದಾರೆ ಎಂದು ಹೇಳುತ್ತಾರೆ. ಸದರಿ ಬಾಡಿಗೆ ಹಣದಲ್ಲಿ ನಿಮ್ಮ ತಾಯಿಯವರು ತಮ್ಮ ಸ್ವಂತ ಖರ್ಚುಗಳನ್ನು ಮಾಡಿಕೊಂಡಿದ್ದಾರೆ ಎಂದರೆ ಸರಿ. ಸಾಕ್ಷಿಗೆ ಸ್ವತಹಃ ಮುಂದುವರೆದು 4 ನೇ ಪ್ರತಿವಾದಿ ನನ್ನ ತಾಯಿಯ ಖರ್ಚು ವೆಚ್ಚ ಎಲ್ಲಾ ನೋಡಿಕೊಳ್ಳುತ್ತಿರಲಿಲ್ಲ ಆದ್ದರಿಂದ ಅವರು ಬಾಡಿಗೆಯಿಂದ ಬಂದ ಹಣದಲ್ಲಿ ತಮ್ಮ ಖರ್ಚು ವೆಚ್ಚ ನೋಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ನಿಮ್ಮ ತಂದೆಯವರಿಗೆ ಸೇರಿದ ಬಸವೇಶ್ವರ ಬ್ಯಾಂಕನಲ್ಲಿ ಅದರ ನಂ.1408 ರಲ್ಲಿ ರೂ.23,442/- ಹಣ ಇತ್ತು , ನಿಮ್ಮ ತಂದೆ ತೀರಿಕೊಂಡ ನಂತರ ಸದರಿ ಹಣ ನಿಮ್ಮ ತಾಯಿಯ ಖಾತೆಗೆ ಜಮಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಿಃ 01/05/2017 ರಿಂದ ನಿಮ್ಮ ಮನೆಯಲ್ಲಿ ನಿಮ್ಮ ತಾಯಿ ಬಂದು ವಾಸವಾಗಿದ್ದರು ಎಂದರೆ ಸಾಕ್ಷಿ 4 ನೇ ಪ್ರತಿವಾದಿ ನನ್ನ ತಾಯಿಗೆ ಸರಿಯಾಗಿ ನೋಡದೆ ಇರುವುದರಿಂದ ಮತ್ತು ಬಾಡಿಗೆಯಲ್ಲಿ ಬಂದ ಹಣವನ್ನು ತಾನೇ ಉಪಯೋಗಿಸುತ್ತಿದ್ದರಿಂದ ನನ್ನ ತಾಯಿ ನನ್ನ ಜೊತೆ

ಸ್ವಲ್ಪ ದಿನ ಮತ್ತು ನನ್ನ ಸಹೋದರಿಯಾದ ನಿರ್ಮಲಾ ರವರ ಜೊತೆ ಸ್ವಲ್ಪ ವಾಸವಾಗಿದ್ದರು ಎಂದು ಹೇಳುತ್ತಾರೆ. ಸಾಕ್ಷಿ ಸ್ವತಹಃ ಮುಂದುವರೆದು 1 ನೇ ಪ್ರತಿವಾದಿಯ ಮನೆಯಲ್ಲಿಯೂ ಸಹ ವಾಸವಾಗಿದ್ದರು ಎಂದು ಹೇಳುತ್ತಾರೆ. ದಿಃ 22/03/2018 ರಂದು ನಿಮ್ಮ ತಾಯಿ ನಿಮ್ಮ ಮನೆಯಲ್ಲಿ ಇಟ್ಟುಕೊಂಡು ಬಿ ಕೆ ಗೋಪಾಲ ಮತ್ತು 4 ನೇ ಪ್ರತಿವಾದಿಗೆ ಕೆವಿಯಟ್ ನೋಟಿಸನ್ನು ಕಳುಹಿಸಿದ್ದಾರೆ ಎಂದರೆ ಸಾಕ್ಷಿ ಆ ಸಮಯದಲ್ಲಿ ನನ್ನ ತಾಯಿ ನನ್ನ ಬಳಿ ಇದ್ದರೋ ಇಲ್ಲವೋ ಎಂದು ನನಗೆ ನೆನಪಿಲ್ಲ, 4 ನೇ ಪ್ರತಿವಾದಿ ನನ್ನ ತಾಯಿ ಬಾಡಿಗೆಹಣ ಪಡೆದುಕೊಳ್ಳಲು ತಕರಾರು ಮಾಡುತ್ತಿದ್ದರು, ನನ್ನ ತಾಯಿಯ ಉಪಜೀವನಕ್ಕೆ ತೊಂದರೆ ಆಗುತ್ತಿದ್ದರಿಂದ ನನ್ನ ತಾಯಿ ಕೆವಿಯಟ್ ನೋಟಿಸು ಕಳುಹಿಸಿದ್ದರು ಎಂದು ಹೇಳುತ್ತಾರೆ. ದಿಃ 15/10/2018 ರಂದು ಬಾಡಿಗೆ ಹಣ ಪಡೆದುಕೊಳ್ಳುವ ಸಲುವಾಗಿ ಬಿ ಕೆ ಗೋಪಾಲ, 4 ನೇ ಪ್ರತಿವಾದಿ, ಸಿದ್ದರಾಮೇಶ ಗಡಗಿ ಇವರಿಗೆ ವಕೀಲರ ಮೂಲಕ ನೋಟಿಸು ಕಳುಹಿಸಿದ್ದಾರೆ ಎಂದರೆ ಕಳಹಿಸರಬಹುದು ಎಂದು ಹೇಳುತ್ತಾರೆ. ದಿಃ 01/05/2017 ರಿಂದ 17/06/2018 ರವರೆಗೆ ಒಟ್ಟು 2 ವರ್ಷ 4 ತಿಂಗಳ ಒಟ್ಟು ಬಾಡಿಗೆ ರೂ.2,24,000/- ನಿಮ್ಮ ತಾಯಿ ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಅದು ಅವರ ಪಾಲಿನ ಆಸ್ತಿಯಾಗಿದ್ದರಿಂದ ಅವರು ತೆಗೆದುಕೊಂಡಿರಬಹುದು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ನಿಮ್ಮ ಮನೆಯಲ್ಲಿ ಇದ್ದುಕೊಂಡು ನಿಮ್ಮ ತಾಯಿ ಗುರುಕುಲ ಕ್ಲಾಸನ ಬಾಡಿಗೆಯೂ ಸಹ ತೆಗೆದುಕೊಂಡಿದ್ದಾರೆ ಎಂದರೆ ಸಾಕ್ಷಿ ನನ್ನ ಮನೆಯಲ್ಲಿ ಇಟ್ಟುಕೊಂಡು ತೆಗೆದುಕೊಂಡಿದ್ದಾರೆ ಎಂದರೆ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ.

**ಮುಂದಿನ ಪಾಟೀ ಸವಾಲಿಗೆ ಕಾಲವಕಾಶ ಕೇಳಿದ್ದು ಆಲಿಸಿ ಮುಂದೂಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
17.06.2026

**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**